ಸಾಕ್ಷಿಯ ಹೆಸರು : ಮೊಹಮ್ಮದ್ ಇಮ್ತಿಯಾಜ್ ಹಮ್ಜಾ ಸಿದ್ಧುಬಡಿ

**ದಿನಾಂಕಃ 10-12-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ- ಆರೋಪಿ ಪರ ಸಿ.ಎಲ್.ಎ.ಡಿ.ಸಿ. ರವರಿಂದಃ-**

5. ಈ ಘಟನೆ ನಡೆಯುವ ಸಮಯದಲ್ಲಿ ನಾನು ಆಟೋ ಚಾಲಕನಾಗಿದ್ದೆ ಹಾಗೂ ಕಳೆದ ಒಂದೂವರೆ ವರ್ಷದಿಂದ ಲಾರಿ ಚಾಲಕನಾಗಿ ಕೆಲಸ ಮಾಡುತ್ತಿದ್ದೇನೆ. ನಾನು ಆಟೋದಲ್ಲಿ ಪ್ರಯಾಣಿಕರನ್ನು ಕರೆದುಕೊಂಡು ಬೇರೆ ಊರುಗಳಿಗೆ ಹೋಗುತ್ತೇನೆ ಎಂದರೆ ಸರಿ. ಜನತಾ ಕಾಲೋನಿಯಲ್ಲಿ ಬಹಳಷ್ಟು ಮನೆಗಳು ಇವೆ ಎಂದರೆ ಸರಿ. ಘಟನಾ ಸಮಯದಲ್ಲಿ ಚಾ.ಸಾ.10 ರವರು ಸುಮಾರು 25 ಅಡಿ ದೂರದಿಂದ ಮೊಬೈಲಿನಲ್ಲಿ ವಿಡೀಯೊ ಮಾಡುತ್ತಿದ್ದರು. ಚಾ.ಸಾ.10 ರವರು ಎಷ್ಟು ಸಮಯದವರೆಗೆ ವಿಡೀಯೊ ಮಾಡಿದ್ದರು ಎಂದರೆ ಸಾಕ್ಷಿಯು ಮೊದಲು ಸುಮಾರು 15 ನಿಮಿಷಗಳವರೆಗೆ ಎಂದು, ಅನಂತರ 15 ಸೆಕೆಂಡುಗಳವರೆಗೆ ಎಂದು ನುಡಿಯುತ್ತಾರೆ. ಜನತಾ ಕಾಲೋನಿಯಿಂದ ಮಸೀದಿಗೆ ಹೋಗಲು ಜನರಿಗೆ ಬಹಳಷ್ಟು ದಾರಿಗಳು ಇರುತ್ತದೆ. ಘಟನೆಯ ಸ್ಥಳದಲ್ಲಿ ರಸ್ತೆಯ ಕಾಮಗಾರಿ ನಡೆಯುತ್ತಿತ್ತು ಎಂದರೆ ಸರಿಯಲ್ಲ. ಅದೇ ರೀತಿ ಮರಗಳನ್ನು ಕತ್ತರಿಸಲಾಗಿತ್ತು ಎಂದರೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಚಾ.ಸಾ.15 ರವರು ಚಾ,ಸಾ.14 ರವರ ಮನೆಗೆ ಬಟ್ಟೆ ತೊಳೆಯಲು ಹೋಗಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ಆರೋಪಿಯು ಚಾ.ಸಾ.15 ರವರೊಂದಿಗೆ ಅಸಭ್ಯವಾಗಿ ವರ್ತಿಸಿಲ್ಲ ಎಂದರೆ ಸರಿಯಲ್ಲ. ಮೃತ ಅಬುತಾಲೀಬ್ ರವರು ಆರೋಪಿಯನ್ನು ಉದ್ದೇಶಿಸಿ ಯಾಕೆ ತೊಂದರೆ ನೀಡುತ್ತಿಯಾ ಹಾಗೂ ಅಜರುದ್ದೀನ್ ರವರ ಹೆಂಡತಿ ಅಂಜುಂ ಗೆ ಯಾಕೆ ಲುಂಗಿ ಎತ್ತಿ ತೋರಿಸಿ, ಅಸಭ್ಯವಾಗಿ ವರ್ತಿಸಿದೆ ಎಂದು ಹೇಳಿದಾಗ, ಆರೋಪಿಯು ಅಬುತಾಲೀಬನನ್ನು ಉದ್ದೇಶಿಸಿ ನನ್ನನ್ನು ಕೇಳಲು ನೀನು ಯಾರು ರಾಂಡಕೇ ಬೇಟೆ ಎಂದು ಬೈದು ಬೇರೆ ಹೆಂಗಸರ ವಿಷಯ ನಿನಗೆ ಯಾಕೆ ಬೇಕು ಎಂದು ಹೇಳಿರುತ್ತಾನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಚಾ.ಸಾ.14 ಹಾಗೂ ಆರೋಪಿಯ ಮನೆ ಅಕ್ಕ ಪಕ್ಕದಲ್ಲಿರುತ್ತದೆ ಎಂದರೆ ಸರಿ. ಅವರಿಬ್ಬರ ನಡುವೆ ಗಿಡ ಮರಗಳ ಬಗ್ಗೆ ಹಾಗೂ ಕಂಪೌಂಡಗಳ ವಿಷಯಗಳ ಬಗ್ಗೆ ಜಗಳ ಇತ್ತು ಎಂದರೆ ನನಗೆ ಗೊತ್ತಿಲ್ಲ.

(ನ್ಯಾಯಾಲಯದ ಸಮಯ ಮುಕ್ತಾಯವಾಗಿದ್ದರಿಂದ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

Sd/-

(ಮಾಯಣ್ಣ ಬಿ.ಎಲ್.)

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಉತ್ತರಕನ್ನಡ, ಕಾರವಾರ.